# ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

## ಸಿ.ಸಿ.ನಂ. 66/2013

| | | | |
|---|---|---|---|
| ಸಾಕ್ಷಿದಾರರ ಹೆಸರು | ದೀಪಕ್ ಎಂ ಎಸ್ | P.W | 29 |
| ತಂದೆಯ ಹೆಸರು | ಸುಭಾಷ್ ಹೆಗಡೆ | C.W | 54 |
| ವಯಸ್ಸು | 42 ವರ್ಷ | | |
| ಉದ್ಯೋಗ | ಸಿ ಪಿ ಐ , ಹೊಳಲ್ಕೆರೆ ವೃತ್ತ , ಚಿತ್ರದುರ್ಗ | ಪ್ರ.ವ.ಬೋ | |
| ವಾಸಸ್ಥಳ | ಚಿತ್ರದುರ್ಗ | ದಿನಾಂಕಃ 09.03.2023 | |

**<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>**

ನಾನು ಸೆಪ್ಟೆಂಬರ್ 2008 ರಿಂದ ಜುಲೈ -2011 ರವರೆಗೆ ಸಕಲೇಶಪುರ ನಗರ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕಃ 05-10-2009 ರಂದು ಪ್ರಕರಣದ ಕಡತವನ್ನು ಚಾಸಾ 53 ರವರಿಂದ ಪಡೆದುಕೊಂಡು ತನಿಖೆ ಮುಂದುವರಿಸಿದೆನು. ಅದೇ ದಿನ ಕೃತ್ಯ ಸ್ಥಳಕ್ಕೆ ಹೋಗಿ ಪಂಚರಾದ ಚಾಸಾ-8 ರಿಂದ 10 ರವರ ಸಮಕ್ಷಮ ಪಿರ್ಯಾದಿ ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಸ್ಥಳ

ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿ ಪಡೆದಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ 59 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ59 ಡಿ ಎಂದು ಗುರುತಿಸಲಾಯಿತು.

ದಿಃ 23-10-2009 ರಂದು ಆರೋಪಿಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 12-11-2009 ರಂದು ಸಕಲೇಶಪುರ ಎಸ್ ಬಿ ಎಂ ಬ್ಯಾಂಕ್ ಗೆ ಭೇಟಿ ನೀಡಿ ಪಂಚರಾದ ಚಾಸಾ-11 ರಿಂದ 13 ರವರ ಸಮಕ್ಷಮ ಬ್ಯಾಂಕ್ ನವರು ಹಾಜರುಪಡಿಸಿದ ಈ ಪ್ರಕರಣಕ್ಕೆ ಸಂಬಂಧಿಸಿದ ಮಳಲಿ ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಎರಡು ಖಾತೆಗಳಿಗೆ ಸಂಬಂಧಿಸಿದ ಚೆಕ್ಕಿನ ವಿವರಗಳು ಹಾಗೂ ಖಾತೆ ತೆರೆಯುವ ಸಮಯದಲ್ಲಿ ನೀಡಿದ ದಾಖಲೆ ಮತ್ತು ಮಾದರಿ ಸಹಿಗಳನ್ನು ಸ್ಥಳದಲ್ಲಿ ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 4.00 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಪಂಚರ ಸಹಿ ಪಡೆದಿರುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ 76 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-76ಎ ಎಂದು ಗುರುತಿಸಲಾಯಿತು. ಅಮಾನತ್ತು ಪಡಿಸಿಕೊಂಡ ದಾಖಲೆಗಳನ್ನು ನಮ್ಮ ಠಾಣಾ ಪಿ ಎಫ್ 182/2009 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡೆನು .

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಮಾನ್ಯ ಸ ಸ ಅ ಅವರು ಕಾಲಾವಕಾಶ ಕೋರಿದ್ದು , ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒ

ಸಾಕ್ಷಿ ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ಸಕಲೇಶಪುರ.